ವಿಜಯಲಕ್ಷ್ಮಿ ಹೇಳುವುದು ವಿದೇಶಿ ಕಛೇರಿ ಬಗ್ಗೆ... 'ವಿದೇಶಗಳಲ್ಲಿ ಸಭಾಂಗಣಗಳು ಬಹಳ ಸುಸಜ್ಜಿತವಾಗಿರುತ್ತವೆ. ಆ್ಯಮ್‌ಸ್ಟರ್‌ಡ್ಯಾಮ್‌ನ ಆಡಿಟೋರಿಯಂನಲ್ಲಿ ಒಮ್ಮೆ ನಮ್ಮ ಕಛೇರಿ ಇತ್ತು. 250 ಜನ ಕುಳಿತುಕೊಳ್ಳಬಹುದಾದ ಆಡಿಟೋರಿಯಂ ಅದು. ಅಲ್ಲಿ ಮೈಕ್ ಇಲ್ಲದೆಯೂ ನಾದ ಸೊಗಸಾಗಿ ಕೇಳುತ್ತದೆ ಎಂದು ಅನುಭವಿಯೊಬ್ಬರು ಹೇಳಿದ್ದರು. ಹೀಗಾಗಿ ಮೈಕ್ ಬೇಡ ಎಂದೆವು. ಅತ್ಯಂತ ನೈಜವಾಗಿ ಮೂಡಿಬಂದ ನಾದದಲೆ ಎಲ್ಲರಿಗೂ ಬಹಳ ಇಷ್ಟವಾಯಿತು' ಎಂದರು.

'2019ರಲ್ಲಿ ಅಮೆರಿಕದ ಡಲ್ಲಾಸ್‌ನಲ್ಲಿ ಪಂಚಭೂತ ಪರಿಕಲ್ಪನೆಯಲ್ಲಿ ಆರ್ಕೆಸ್ಟ್ರಾ ನಡೆಸಿಕೊಟ್ಟೆವು. ಭೂಮಿ, ಗಾಳಿ, ಅಗ್ನಿ, ಜಲ, ವರುಣನ ಮೇಲೆ ಸಂಯೋಜಿಸಿದ ರಾಗಾಧಾರಿತ ಈ ಕಾರ್ಯಕ್ರಮ ಬಹಳ ಯಶಸ್ವಿಯಾಯಿತು. ಇದು ಸ್ಮರಣೀಯ' ಎಂಬುದು ಈ ವಿದುಷಿ ವಿವರಣೆ.

ಅಣ್ಣ–ತಂಗಿ ಇಬ್ಬರಿಗೂ ತಮ್ಮ ತಂದೆ/ಗುರುಗಳಾದ ಲಾಲ್ಗುಡಿ ಜಯರಾಮನ್ ಬಗ್ಗೆ ಅಪಾರ ಗೌರವ. 'ಜನ್ಮ, ಬದುಕು ನೀಡಿದ ಜೊತೆಗೆ ಸಂಗೀತದ ಪಲುಕನ್ನೂ ಜೀವನದಲ್ಲಿ ಕಲಿಸಿದವರು ನಮ್ಮ ತಂದೆ ಎಂಬ ಹೆಮ್ಮೆ ನಮ್ಮದು. ಇದು ನಮ್ಮ ಅದೃಷ್ಟವೂ ಹೌದು. ಎಷ್ಟು ಜನ ಸಂಗೀತಗಾರರಿಗೆ ಇಂತಹ ಸುವರ್ಣಾವಕಾಶ ಸಿಗುತ್ತೆ ಹೇಳಿ?' ಎಂದು ನೆನಪಿನಾಳಕ್ಕೆ ಜಾರುವ ಕೃಷ್ಣನ್, '1973ರಲ್ಲಿ ನಾನು ಪಿಟೀಲು ಕಛೇರಿ ನೀಡಲಾರಂಭಿಸಿದೆ. ಮೊದಲ ಕಛೇರಿ ಅಪ್ಪನೊಂದಿಗೆಯೇ. 2006ರವರೆಗೂ ಅಪ್ಪನೊಂದಿಗೆ ಕಛೇರಿ ನೀಡುತ್ತಾ ಬಂದೆ. 13 ವರ್ಷ ಇರುವಾಗ ಪಿಟೀಲು ನುಡಿಸಲು ಆರಂಭಿಸಿದ ನನ್ನ–ಪಿಟೀಲಿನ ಒಡನಾಟಕ್ಕೆ ನಾಲ್ಕು ದಶಕಗಳಿಗೂ ಮೀರಿದ ಬಾಂಧವ್ಯ' ಎಂದರು.

'ಸೋಲೊ, ಯುಗಳ ಕಛೇರಿಗಳಲ್ಲದೆ ಕರ್ನಾಟಕ ಶಾಸ್ತ್ರೀಯ ಸಂಗೀತದ ಘಟಾನುಘಟಿ ಕಲಾವಿದರಾದ ಶೆಮ್ಮಂಗುಡಿ, ಮಹಾರಾಜಪುರ ಸಂತಾನಂ ಅವರ ಗಾಯನಕ್ಕೆ ಪಿಟೀಲು ಪಕ್ಕವಾದ್ಯ ನುಡಿಸಿದ್ದೇನೆ. ಮ್ಯಾಂಡೊಲಿನ್

**ಇಟಲಿಯಿಂದ ಬಂದ ಪುಟಾಣಿ ತಂತಿವಾದ್ಯ ಪಿಟೀಲಿನಲ್ಲಿ ಮಾಧುರ್ಯಭರಿತ 'ಲಾಲ್ಗುಡಿ ಬಾನಿ'ಯನ್ನು ನುಡಿಸಿ ವಿಶ್ವವಿಖ್ಯಾತರಾದವರು ಸಂಗೀತ ಪರಂಪರೆಯ ವಾದಕ–ವಾದಕಿ ಜಿ.ಜೆ.ಆರ್. ಕೃಷ್ಣನ್ ಹಾಗೂ ಲಾಲ್ಗುಡಿ ವಿಜಯಲಕ್ಷ್ಮಿ. ಇತ್ತೀಚೆಗೆ 'ಸ್ಪಿಕ್‌ಮೆಕೆ' ಬೆಂಗಳೂರಿನಲ್ಲಿ ನಡೆಸಿದ ಸಂಗೀತ ಕಛೇರಿಯಲ್ಲಿ ಭಾಗವಹಿಸಲು ಈ ಅಣ್ಣ–ತಂಗಿ ಚೆನ್ನೈಯಿಂದ ಬಂದಿದ್ದರು. ಕಛೇರಿಗೂ ಮುನ್ನ ತಮ್ಮ ಯುಗಳ ವಾದನದ ಬಗ್ಗೆ 'ಸುಧಾ'ದೊಂದಿಗೆ ಮಾತನಾಡಿದರು.**

■ ಉಮಾ ಅನಂತ್

ಶ್ರೀನಿವಾಸನ್ ಜೊತೆಗೆ ಜುಗಲ್‌ಬಂದಿ ನಡೆಸಿಕೊಟ್ಟಿದ್ದೇನೆ. ಭರತನಾಟ್ಯದ ಹಲವಾರು ಕೃತಿಗಳಿಗೆ ಸ್ವರಮಟ್ಟುಗಳನ್ನು ಹಾಕಿ ನುಡಿಸಿದ್ದೇನೆ. ಹಲವಾರು ಹಾಡುಗಳಿಗೆ ಸ್ವರ ಸಂಯೋಜಿಸಿ ಕೊರಿಯೊಗ್ರಫಿಯನ್ನೂ ಮಾಡಿದ್ದೇನೆ' ಎಂದು ತಮ್ಮ ಅನುಭವಗಳ ಗಣಿಯನ್ನು ಹಂಚಿಕೊಂಡರು ಈ ಪಿಟೀಲು ವಿದ್ವಾಂಸ.

ಅಣ್ಣನಂತೆಯೇ ತಂಗಿಯ ಪಿಟೀಲಿನ ಎಳೆಎಳೆಯಲ್ಲೂ ಮಾಧುರ್ಯದ ಹೊನಲು! 'ಪಿಟೀಲಿನಲ್ಲಿ ಸೋಲೊ, ಯುಗಳ ಕಛೇರಿಗಳಲ್ಲದೆ ಹಲವು ಘಟಾನುಘಟಿ ಕಲಾವಿದರ ಗಾಯನಗಳಿಗೆ ತಾನೂ ಪಿಟೀಲು ಪಕ್ಕವಾದ್ಯ ನೀಡಿರುವುದನ್ನು ವಿವರಿಸುವ ವಿಜಯಲಕ್ಷ್ಮಿ, ಸಂಗೀತದಲ್ಲಿ ಖ್ಯಾತನಾಮರಾದ ಟಿ.ವಿ.ಶಂಕರನಾರಾಯಣ, ಟಿ.ವಿ. ಗೋಪಾಲಕೃಷ್ಣನ್, ಚಿತ್ರವೀಣಾ ರವಿಕಿರಣ್, ವಿಜಯಶಿವ, ಮಲ್ಲಾಡಿ ಸಹೋದರರು, ಅಭಿಷೇಕ್ ರಘುರಾಮ್.. ಮುಂತಾದವರಿಗೆ ಪಿಟೀಲು ನುಡಿಸಿದ್ದೇನೆ. ಎಂಬತ್ತರ ದಶಕದಲ್ಲಿ ಉತ್ತರ ಅಮೆರಿಕದ 30 ದೇಶಗಳಲ್ಲಿ ಅಣ್ಣನ ಜತೆಗೂಡಿ ಒಂದು ತಿಂಗಳ ಕಾಲ ಪಿಟೀಲು ಕಛೇರಿ ನೀಡಿದ್ದು, ಹೆಚ್ಚು ಜನಪ್ರಿಯತೆ ತಂದುಕೊಟ್ಟಿದ್ದನ್ನು ಸ್ಮರಿಸುತ್ತಾರೆ. ಅಮೆರಿಕ, ಕೆನಡ, ಇಂಗ್ಲೆಂಡ್, ಯೂರೋಪ್, ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಮಲೇಷ್ಯಾ, ಸಿಂಗಪುರಗಳಲ್ಲಿ ನಿರಂತರವಾಗಿ 'ಲಾಲ್ಗುಡಿ ಬಾನಿ' ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ' ಎನ್ನುವಾಗ ಇವರ ಮಾತಿನಲ್ಲಿ ಧನ್ಯತೆಯ ಭಾವ!

ಸಂಗೀತವಲ್ಲದೆ ಪ್ರಕೃತಿಯನ್ನು ಇಬ್ಬರೂ ಬಹುವಾಗಿ ಪ್ರೀತಿಸುತ್ತೇವೆ. ಫೋಟೊಗ್ರಫಿ ಇಷ್ಟ. ಕವನ ಬರೆಯುವುದು ಹವ್ಯಾಸ, ಬೀಚ್‌ಗೆ ಹೋಗುವುದು, ಸಿನಿಮಾ ನೋಡುವುದು, ದೇವಸ್ಥಾನಗಳಿಗೆ ಭೇಟಿ ನೀಡುವುದು ಇಬ್ಬರ ಬದುಕಿನ ಭಾಗ.

'ನಾನು ಪ್ರಕೃತಿ ಪ್ರಿಯೆ. ಸಂಗೀತ ಆರಾಧಕಿ. ಈ ಎರಡೂ ನನ್ನನ್ನು ಬಹುವಾಗಿ ಪ್ರೇರೇಪಿಸಿರುವುದರ ಪರಿಣಾಮ ಪ್ರಕೃತಿ ಮತ್ತು ಸಂಗೀತದ ಬಗ್ಗೆ ಕವನಗಳನ್ನು ಬರೆದಿದ್ದೇನೆ. ಕರ್ನಾಟಕ ಶಾಸ್ತ್ರೀಯ ಸಂಗೀತದ ಅನೇಕ ತಿಲ್ಲಾನ ಹಾಗೂ ವರ್ಣಗಳನ್ನು ಬರೆದಿದ್ದೇನೆ' ಎಂದು ತನ್ನ ಬರವಣಿಗೆಯ ಕೌಶಲವನ್ನು ಅನಾವರಣಗೊಳಿಸಿದರು ಲಾಲ್ಗುಡಿ ವಿಜಯಲಕ್ಷ್ಮಿ.

ಇಬ್ಬರೂ ತಮ್ಮ ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಲೇ ಭಾರತೀಯ ಸಂಗೀತ ಪರಂಪರೆಯ ಬಗ್ಗೆ ಮಾತು ಹೊರಳಿತು. ಸ್ಪಿಕ್‌ಮೆಕೆ ಸಂಸ್ಥೆ ಭಾರತೀಯ ಸಂಗೀತದ ಉಳಿವಿಗೆ ಶ್ರಮಿಸುತ್ತಿದೆ. ನಮ್ಮ ದೇಶದಲ್ಲಿ ಬೇರೆ ಯಾವುದೇ ಸರ್ಕಾರೇತರ ಸಂಸ್ಥೆ ಇಷ್ಟು ಅಚ್ಚುಕಟ್ಟಾಗಿ ಶಾಸ್ತ್ರೀಯ ಸಂಗೀತವನ್ನು ಪೋಷಿಸುವುದನ್ನು ನಾವು ನೋಡೇ ಇಲ್ಲ. ಶಾಲೆ, ಕಾಲೇಜುಗಳಲ್ಲಿ, ವಿವಿಗಳಲ್ಲಿ ಸಂಗೀತ ಕಛೇರಿ ಆಯೋಜಿಸಿ ಸಂಗೀತದ ಕಂಪನ್ನು ಹರಡುವುದರಲ್ಲಿ ಶಕ್ತಿಮೀರಿ ಶ್ರಮಿಸುವುದು ಹೆಮ್ಮೆಯ ಸಂಗತಿ. 1986ರಿಂದ ಕಾಲೇಜಿನಲ್ಲಿ ಮೊದಲ ಬಾರಿಗೆ ಸ್ಪಿಕ್‌ಮೆಕೆ ಆಯೋಜಿಸಿದ ಕಛೇರಿಯಲ್ಲಿ ಪಿಟೀಲು ನುಡಿಸಿದ ಬಳಿಕ ಅಲ್ಲಿಂದ ಇಂದಿನವರೆಗೆ ಪ್ರತೀವರ್ಷ ಈ ಸಂಸ್ಥೆ ವತಿಯಿಂದ ಬೇರೆ ಬೇರೆ ಕಡೆಗಳಲ್ಲಿ ನುಡಿಸುತ್ತಲೇ ಬಂದಿದ್ದೇವೆ' ಎಂದು ಸಂಗೀತ ಪೋಷಕ ಸಂಸ್ಥೆಯನ್ನು ಬಹುವಾಗಿ ಶ್ಲಾಘಿಸಿದರು.

ಅಣ್ಣ–ತಂಗಿಯರ ಪಿಟೀಲು ತನಿಗೆ ಸಮಯದ ಹಂಗಿಲ್ಲ. ಪುಟ್ಟ ತಂತಿವಾದ್ಯದಲ್ಲಿ ರಾಗ–ಅನುರಾಗದ ಹೊನಲು ಹರಿಸುತ್ತಲೇ ಇರುತ್ತಾರೆ. ಸಂಗೀತದ ಬಗ್ಗೆ ಹರಟುತ್ತಲೇ ಕೊನೆಯದಾಗಿ, 'ಅಪ್ಪನ ಬಗ್ಗೆ ಹೇಳಲೇಬೇಕು. ಪಿಟೀಲಿನಲ್ಲಿ ಅಪ್ಪ (ಲಾಲ್ಗುಡಿ ಜಯರಾಮನ್) ನಿಪುಣರು. ವಿಶ್ವಮಟ್ಟದಲ್ಲಿ ಖ್ಯಾತಿ ಗಳಿಸಿ ಉತ್ತುಂಗಕ್ಕೇರಿದ್ದರೂ ಅವರ ಮನಸ್ಸು ಮಾತ್ರ ಮಗುವಿನ ಹಾಗೆ' ಎನ್ನುತ್ತಾ ಮಾತಿಗೆ ಪೂರ್ಣವಿರಾಮ ಹಾಕಿದರು.

ಪ್ರತಿಕ್ರಿಯಿಸಿ: feedback@sudha.co.in



ಲಾಲ್ಗುಡಿ ಜಿಜೆಆರ್ ಕೃಷ್ಣನ್ –ಲಾಲ್ಗುಡಿ ವಿಜಯಲಕ್ಷ್ಮಿ